## ಗೋಲಗುಂಬಜ್ ಮೇಲೆ ರಂಗೋಲಿ!

ಇದು ವಿಶ್ವಪ್ರಸಿದ್ಧ ವಿಜಯಪುರದ ಗೋಲಗುಂಬಜ್‌ನ ಗೋಡೆಯ ಮೇಲಿನ ಚಿತ್ರ. ಬೃಹತ್ ದ್ವಾರದ ಮೇಲ್ಗಡೆ ಗುಂಬಜ್‌ನ ಒಳಗೋಡೆಯಲ್ಲಿ ರಚಿಸಲಾಗಿರುವ ಈ ಚಿತ್ರ ರಂಗೋಲಿಯಂತೆ ಕಾಣುತ್ತದೆ.

**-ಸುರೇಶ್ ತಾಂಡೇಲ್, ಹೊನ್ನಾವರ**





## 'ನಪ್ಪು ಬಾಲೆ'

ನವರಾತ್ರಿ ಹಬ್ಬದ ಪ್ರಮುಖ ಆಕರ್ಷಣೆ ಎಂದರೆ ವೈವಿಧ್ಯಮಯ ವೇಷಗಳು. ಹುಲಿ, ಸಿಂಹ, ಕರಡಿ, ರಾಕ್ಷಸ ವೇಷಗಳು ಗಲ್ಲಿ ಗಲ್ಲಿಗಳಲ್ಲಿ ಘರ್ಜಿಸಿದರೆ, ನಾಟಿ ವೈದ್ಯ, ಪೇಪರ್ ಮಾರುವ ಹುಡುಗ, ಪೇಂಟರ್‌ಗಳು ನಗು ತರಿಸುತ್ತವೆ. ವನವಾಸದ ಬಳಿಕ ಪಾಂಡವರು ವೇಷ ಮರೆಸಿಕೊಂಡು ಅಜ್ಞಾತ ವಾಸದಲ್ಲಿದ್ದ ಕಥೆ ಈ ಛದ್ಮವೇಷಗಳಿಗೆ ಸ್ಫೂರ್ತಿಯಂತೆ.

ಯಾವ ಅಬ್ಬರ ಇಲ್ಲದೆ ಎಲ್ಲರಿಗೂ ಇಷ್ಟವಾಗಿರುವ ಒಂದು ವೇಷವೇ 'ನಪ್ಪು ಬಾಲೆ'. 'ನಲಿಪ್ಪು ಬಾಲೆ ನಲಿಪ್ಪು ಬೈತ್ತರಿತ್ತ ನಪ್ಪು, ಚೇರಂಟೆದ ಚಟ್ನಿ, ಒಲ್ಲದ ಸಾರು, ಕಂದೊಡಿದ ಗಸಿ, ಪೆರ್ಮರಿತ್ತ ಸಾಂಬಾರು...' ಎಂದು ತುಳು ಭಾಷೆಯಲ್ಲಿ ತನ್ನ ಮುದ್ದು ಮಗುವಿನ ಪೌಷ್ಟಿಕ ಆಹಾರದ ಪಟ್ಟಿಯನ್ನು ತಾಳಬದ್ಧವಾಗಿ ಹಾಡುತ್ತಾ ದೊಣ್ಣೆಯನ್ನು ನೆಲಕ್ಕೆ ಕುಟ್ಟಿ ಗೆಜ್ಜೆಸದ್ದು ಮಾಡಿ ಕುಣಿಯುವ ವೃದ್ಧನ ಪಾತ್ರ ಎಲ್ಲರಿಗೂ ಅಚ್ಚುಮೆಚ್ಚು. ಬಾಲೆ ಬತ್ತಾಲಮ್ಮಾ ಬಾಲೆ... ವಾ ಚಾಲಾಕೂ... ವಾ ಚಾಲಾಕೂ ಎಂದು ತನ್ನ ಮಗುವನ್ನು ತಾನೇ ಹೊಗಳಿಕೊಳ್ಳುವ ಈ ಪಾತ್ರದಲ್ಲಿ ಗ್ರಾಮೀಣ ಸೊಗಡಿದೆ.

ಪಾಡ್ಯದ ದಿನ ಈ ಹವ್ಯಾಸಿ ಕಲಾವಿದರು ಗ್ರಾಮ ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸಿ ಬಣ್ಣ ಹಾಕುತ್ತಾರೆ. ವೇಷಧರಿಸಿ ಊರೂರು ಸುತ್ತಿ ವಿಜಯದಶಮಿಯಂದು ತಾವು ಹರಕೆ ಹೇಳಿಕೊಂಡ ದೈವೀಕ್ಷೇತ್ರಕ್ಕೆ ಹೋಗಿ ಕಾಣಿಕೆ ಹಾಕಿ ಬಣ್ಣ ಅಳಿಸುತ್ತಾರೆ.

ಚಿತ್ರ-ಬರಹ:

**ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

## ಅಲಂಕಾರಿಕ ಪಾತರಗಿತ್ತಿ

ಹೂವುಗಳದು ಬಹುವರ್ಣಮಯ ಲೋಕ. ಅಂತೆಯೇ ಅವುಗಳ ಮೇಲೆ ಕುಳಿತುಕೊಳ್ಳುವ ಪಾತರಗಿತ್ತಿಯ ಲೋಕವೂ ಹಾಗೆಯೇ. ಈ ಚಿತ್ರದಲ್ಲಿರುವ ಪಾತರಗಿತ್ತಿಯನ್ನು ಎಷ್ಟು ನೋಡಿದರೂ ಕಡಿಮೆಯೇ. ಪ್ರಕೃತಿಯ ಅಂಗಳದಲ್ಲಿ ಸಂಚರಿಸುವ ಇವುಗಳನ್ನು ಕಂಡರೆ ಮಕ್ಕಳಿಗಂತೂ ಪಂಚಪ್ರಾಣ. ಕಿತ್ತೂರಿನ ಶ್ರೀ ಮಂಜುನಾಥ ಫೋಟೊ ಸ್ಟುಡಿಯೋಗೆ ಫೋಟೊ ತೆಗೆಸಿಕೊಳ್ಳುವುದಕ್ಕಾಗಿಯೇ ಎಂಬಂತೆ ಬಂದ ಅತಿಥಿ ಈ ಪಾತರಗಿತ್ತಿ.

**-ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**

